ಪಿಡಬ್ಲ್ಯೂಃ1

ಸಾಕ್ಷಿಯು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿ ವಿಚಾರಣೆಗೆ ಒಳಪಟ್ಟಿದ್ದು, ಅವರನ್ನು ಪಿಡಬ್ಲ್ಯೂ-1 ಎಂದು ಪರಿಗಣಿಸಿ, ಇಂದು ದಿನಾಂಕಃ.13.02.2020 ರಂದು ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ ಎನ್.ಎಸ್.ಎಚ್ ವಕೀಲರಿಂದಃ

ನಾನು ನನ್ನ ಮೌಖಿಕ ವಿಚಾರಣೆಯ ಬದಲಾಗಿ ನನ್ನ ಮುಖ್ಯ ವಿಚಾರಣಾ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ನಿಜವಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿಗಳು ನನ್ನದೇ ಇರುತ್ತವೆ. ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

| ಕ್ರ.ಸಂಖ್ಯೆಃ | ಹಾಜರುಪಡಿಸಿದ ದಾಖಲಾತಿಗಳು | ನಿಶಾನಿಸಲ್ಪಟ್ಟ ಸಂಖ್ಯೆಗಳು |
|---|---|---|
| 1. | ಅಸಲು ದಾವಾ ಸಂಖ್ಯೆ66/2002 ರ ತೀರ್ಪು, ಡಿಕ್ರಿಯ ದೃಢೀಕೃತ ಪ್ರತಿಗಳು | ನಿಪಿ-1 ಮತ್ತು 2 |
| 2. | ಕರನಿರ್ಧರಣಾ ಪಟ್ಟಿ | ನಿಪಿ-3 |
| 3. | ದಿನಾಂಕಃ29.01.2001 ರ ಖರೀದಿ ಪತ್ರ | ನಿಪಿ-4 |
| 4. | ಅಸಲು ದಾವಾ ಸಂಖ್ಯೆ66/2002 ರ ತಿದ್ದುಪಡಿವಾದ ಪತ್ರ, ವಾದ ಪತ್ರ, ಪ್ರತಿವಾದಿ 1, 4, 6 ಮತ್ತು 5 ರವರ ಪ್ರತಿವಾದ ಪತ್ರಗಳ ದೃಢೀಕೃತ ಪ್ರತಿಗಳು | ನಿಪಿ-5 ರಿಂದ 10 |

ಈ ಮೇಲ್ಕಂಡಂತೆ ದಾಖಲಾತಿಗಳನ್ನು ಗುರುತಿಸಲಾಯಿತು. ಆದ್ದರಿಂದ ನನ್ನ ಪರವಾಗಿ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ.

**ಪಾಟೀ ಸವಾಲುಃ** ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಹಿರೇಕೆರೂರು.